

ಅನುರಾಧ ಪಿ.ಎಂ.

ಕಲೆ: ವೆಂಕಟ್ರಮಣ ಭಟ್

# ಪಾರಿ

ಏಪ್ರಿಲ್ ಅತ್ಯಂತ ಕ್ರೂರ ತಿಂಗಳು ಅಂತ ಆಂಗ್ಲ ಕವಿ ಮಹಾಶಯನೊಬ್ಬ ಬರೆದದ್ದು ನೆನಪಿಗೆ ಬರ್ತಾ ಇದೆ. ಆತ ಏಪ್ರಿಲ್ ಒಳಗೆ ಅದೇನು ಅರ್ಥವ್ಯಾಪ್ತಿ ಹರಡಿ ಬಚ್ಚಿಟ್ಟಿದ್ದನೋ ಗೊತ್ತಿಲ್ಲ, ನನಗಂತೂ ನಮ್ಮೂರ ಬಿಸಿಲು ನೋಡಿದ್ರೆ ಅವನ ಸಾಲು ನೂರಕ್ಕೆ ನೂರು ನಿಜ ಅನಿಸುತ್ತೆ. ಅಬ್ಬಾ... ಅದೇನು ಬಿಸಿಲು, ಅದೇನು ತಾಪ, ತನುಮನದ ಜೀವಜಲವನ್ನೆಲ್ಲಾ ಹಾಗೇ ಸರ್ರನೇ ಸೆಳೆದುಕೊಂಡಿದ್ದಾನೆ ಈ ಸೂರ್ಯ, ಉರಿ...ಉರಿ ಉರೀತಾನೆ, ನಮ್ಮನ್ನೂ ಉರಿಸ್ತಾನೆ. ಏಳು ಗಂಟೆಗೇ ಅದೇನು ಝಳ, ಉಸ್, ಉಸ್ ಅಂತಾ ಉರ್ಕೊಂಡು ಊರಿಗೆಲ್ಲಾ ಸಾರ್ಕೊಂಡು ತಾಪ ಹೊರಕ್ಹಾಕೋದಕ್ಕೆ ನಮಗಾಗತ್ತೆ, ಪಾಪ ಈ ಗಿಡಮರಗಳ ಪಾಡು, ಇವಕ್ಕಾದರು ನೀರು ಹಾಯಿಸೋಣ ಅಂದ್ಕೊಂಡು ಹೊರಗಡೆಯ ನಲ್ಲಿಯ ಕಡೆ ನಡೆದಾಗ ತುಸು ನೆಮ್ಮದಿ, ಗಿಡಕ್ಕೆ ನೀರು ಬಿಡ್ತಾ ನೀರಾಟ ಆಡಬಹುದು ತಣ್ಣಗೆ. ಅಲ್ಲೇ ಪಕ್ಷಿಗಳಿಗೆ ಅಂತ ಇಟ್ಟಿದ್ದ ದೊಡ್ಡ ಬಟ್ಟಲಿಗೆ ಮತ್ತು ಹೊರಗಡೆ ಹಸು, ನಾಯಿಗಳಿಗೆ ಇಟ್ಟಿದ್ದ ದೊಡ್ಡ ಡ್ರಮ್ಮಿಗೆ ಪೈಪಲ್ಲಿ ನೀರು ಬಿಟ್ಟು ನಿಂತು ಸುತ್ತ ನೋಡಿದ್ರೆ... ಛೇ... ಅಕ್ಕ ಪಕ್ಕದ ಖಾಲಿ ಸೈಟುಗಳಲ್ಲಿ ಹಸಿರಿದ್ದ ಪೊದೆಗಳು, ಗಿಡಗಂಟಿಗಳೆಲ್ಲಾ ಉಸಿರಳಿದು ಒಣಗಿ ರವಿ ಥರಾನೇ ಉರಿಯೋದಕ್ಕೆ ಮೈ ಚಾಚಿ ನಿಂತಂತಿವೆ... ನೋಡ್ತಾ ಇದ್ರೆ ಮೈಮನಸ್ಸೆಲ್ಲಾ ಕಿಡಿಕಿಡಿಯಾಗುತ್ತೆ. ಸದ್ಯ ಮನೆಯೊಳಗಿನ ಗಿಡಗಳಾದ್ರೂ ಹಸಿರಿವೆ, ಪೈಪು ಎಳೆದು ನೀರು ಬಿಡುವಾಗ ಗಿಡದಲ್ಲಿದ್ದ ಗುಲಾಬಿಗಳು, ನಳನಳಿಸುತ್ತಾ ನೋಡಿ ನಕ್ಕ ಹಾಗಾಯ್ತು. ಭಿಕ್ಷುಕರು, ಹುಚ್ಚರು ಕ್ರಮೇಣ ಕಡಿಮೆ ಆಗ್ತಾ ಇರೋ ಈ ದಿವಸಗಳಲ್ಲಿ ಎರಡು ದಿನಗಳಿಂದ ನಮ್ಮ ಮನೆಯ ಆಸುಪಾಸಿನಲ್ಲಿ ಹುಚ್ಚಿಯೊಬ್ಬಳು ಓಡಾಡ್ತಾ ಇರೋದು ನನ್ನನ್ನೂ ಒಳಗೊಂಡು ಎಲ್ಲರ ಗಮನಕ್ಕೆ ಬಂದರೂ ಸೂಕ್ಷ್ಮವಾಗಿ ಗಮನಿಸಿರಲಿಲ್ಲ. ಇಂದು ಗಿಡಕ್ಕೆ ನೀರು ಹಾಕುತ್ತಿರುವಾಗ ಮತ್ತೊಮ್ಮೆ ಹಾದು ಹೋದವಳು ತಿರುಗಿ ಬಂದು ಗೇಟಿನ ಬಳಿ ನಿಂತು ನನ್ನನ್ನೇ ದಿಟ್ಟಿಸತೊಡಗಿದಳು. ನಾನು ಕೂಡ ನೋಡಿದೆ. ಗಾಢ ಕಪ್ಪು ಮೈಬಣ್ಣ, ಮಾಸಲು ಮುಖ, ಹರಕಲು ಸೀರೆ, ಕೊಂಚ ದಪ್ಪ ಎನ್ನಬಹುದಾದ ಮೈಕಟ್ಟು, ಪಕ್ಕನೆ ಬಿಳಿ ಹಲ್ಲು ಬಿಟ್ಟು ನಕ್ಕಳು... ಅಯ್ಯೋ! ಇವಳು ನಮ್ಮ ಹಳ್ಳಿಯ ಪಾರಿ ಅಲ್ವಾ! ನೀರಿನ ಪೈಪು ಬಿಸಾಕಿ ಓಡಿಹೋಗಿ ಗೇಟು ತೆಗೆದು 'ಏಯ್, ನೀನು ಪಾರಿ ಅಲ್ವಾ? ಅಂದೆ' ಮತ್ತೊಮ್ಮೆ ನಕ್ಕಳು ಕಪ್ಪನೆಯ ಮುಖದಲ್ಲಿ ಬಿಳುಪಾದ ಹಲ್ಲು ಕಿಸಿದು ವಿಕಾರವಾಗಿ, ಆದ್ರೆ ನನಗೆ ಮಾತ್ರ ಖಾತ್ರಿಯಾಯಿತು. ಇವಳು ಪಾರೀನೆ ಅಂತ. 'ಒಳಗಡೆ ಬಾ, ನಾನ್ಯಾರು ಗೊತ್ತಾಯ್ತ?' ಅಂದೆ, ಮತ್ತೆ ಕಿಸಕ್ಕನೆ ನಕ್ಕಳು, ಹಾಗೆ ನಗ್ತಾ ಪಡಸಾಲೆಗೆ ಬಂದು ಕೂತಳು, 'ತಿನ್ನಕ್ಕೇನಾದರು ಇದ್ರೆ ಕೊಡಕ್ಕ' ಅಂದಳು, ತಕ್ಷಣ ಅಡುಗೆ ಮಾಡುವ ಜಯಮ್ಮನನ್ನು ಕೂಗಿದೆ, ಬರುವಾಗಲೆ ದೋಸೆ, ಚಟ್ನಿ, ಪಲ್ಯ ತಂದುಕೊಟ್ಲು. ಗಬಗಬನೆ ತಿಂದು ಗಟಗಟನೆ ನೀರು ಕುಡಿದು, 'ಪುಣ್ಯ ಬರ್ಲಕ್ಕಾ ನಿನಗೆ' ಅಂತ ಎದ್ದು ಹೊರಟೇಬಿಟ್ಟಳು. ನಾನು ಬೇಗನೆ ಹೋಗಿ ಕೈ ಹಿಡಿದು ಎಳೆದು ಒಳಗೆ ಕರೆತಂದೆ, ತಕ್ಷಣವೇ 'ಜಯಮ್ಮ ಬಾ ಇಲ್ಲಿ, ಬೈಕೊಬೇಡ, ಇವಳಿಗೆ ಚೆನ್ನಾಗಿ ಬಿಸಿನೀರಲ್ಲಿ ತಲೆಸ್ನಾನ ಮಾಡಿಸು, ನನ್ನ ಸೀರೇನೆ ಉಟ್ಕೊಳೋದಕ್ಕೆ ಕೊಡು... ಬೇಡ ನೀನೇ ಉಡಿಸು, ಎಷ್ಟು ದಿವಸಗಳಾಗಿದ್ಯೋ ಏನೋ ಸ್ನಾನ ಮಾಡಿ, ಸರೀಗೆ ಮಾಡ್ಸು... ಅಸಹ್ಯ ಮಾಡ್ಕೊಬೇಡ' ಅಂದೆ, ಜಯಮ್ಮ ದಿಗ್ಭ್ರಾಂತಳಾಗಿ ನಿಂತು ನನ್ನನ್ನೇ ನೋಡಿದಳು 'ಆಮೇಲೆ ಎಲ್ಲಾ ಹೇಳ್ತಿನಿ

